ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ:ಜಿಎಲ್13/197(01)/2023-24 ದಿನಾಂಕ.19.10.2026

ಸುತ್ತೋಲೆ

ವಿಷಯ: **"ಗೋವಿನಿಂದ ಗ್ರಾಹಕರವರೆಗೆ"** ಎಂಬ ಶೀರ್ಷಿಕೆಯಲ್ಲಿ ನಂದಿನಿ ಬ್ರಾಂಡ್‌ನ ಉತ್ಪನ್ನಗಳನ್ನು ಹಬ್ಬಗಳ ಸಂದರ್ಭದಲ್ಲಿ ಖರೀದಿಸುವ ಬಗ್ಗೆ.

ಉಲ್ಲೇಖ:1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ, ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ. ಕಹಾಮ/ಮಾರುಕಟ್ಟೆ/ಮಾ&ವಿ/2026-27 ದಿನಾಂಕ.03.10.2026.
2. ಮಾನ್ಯ ಕುಲಪತಿಯವರ ಆದೇಶ ದಿನಾಂಕ:16.10.2026.

****

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ, ನಿಯಮಿತ, ಬೆಂಗಳೂರು, ಇವರು ನಂದಿನಿ ಬ್ರ್ಯಾಂಡಿನಲ್ಲಿ 75ಕ್ಕು ಹೆಚ್ಚು ಬಗೆಯ ಸಾಂಪ್ರದಾಯಿಕ ಸಿಹಿ ಹಾಗೂ ಖಾರ ಉತ್ಪನ್ನಗಳನ್ನು ಉತ್ಪಾದಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಹಬ್ಬ ಹಾಗೂ ಇನ್ನಿತರೆ ವಿಶೇಷ ಸಂದರ್ಭಗಳಲ್ಲಿ ಕೇಂದ್ರ/ರಾಜ್ಯ ಸರ್ಕಾರ ಸ್ವಾಮ್ಯದ ಪ್ರತಿಷ್ಠಿತ ಸಂಸ್ಥೆಗಳಿಗೆ ನಂದಿನಿ ಸಿಹಿ ಉತ್ಪನ್ನಗಳನ್ನು ಸರಬರಾಜು ಮಾಡುತ್ತಾ ಬಂದಿರುತ್ತಾರೆ. ಅಂತೆಯೇ 2026-27ನೇ ಸಾಲಿನ ಅಕ್ಟೋಬರ್/ನವೆಂಬರ್ 2026ರ ಮಾಹೆಗಳಲ್ಲಿ ಆಚರಿಸಲಾಗುವ ದಸರಾ ಹಾಗೂ ದೀಪಾವಳಿ ಹಬ್ಬಗಳಲ್ಲಿ ಅಧಿಕಾರಿ/ಸಿಬ್ಬಂದಿ/ಕಾರ್ಮಿಕರಿಗೆ ಹಬ್ಬದ ಸಡಗರವನ್ನು ಇನ್ನಷ್ಟು ಹೆಚ್ಚಿಸಲು ತಮ್ಮ ಸಂಸ್ಥೆಯ ವತಿಯಿಂದ ಸಿಹಿ ಉತ್ಪನ್ನಗಳನ್ನು ಮೇಲಿನ ಉಲ್ಲೇಖ ಪತ್ರದಲ್ಲಿ ನಾಡಿನ ಸಮಸ್ತ ರೈತರ ಹಾಗೂ ಹೈನುಗಾರರ ಪರವಾಗಿ ಖರೀದಿ ಮಾಡುವಂತೆ ತಿಳಿಸಿರುತ್ತಾರೆ.

ಆದುದರಿಂದ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ, ನಿಯಮಿತ ಇಲ್ಲಿ ಉತ್ಪಾದಿಸುವ ನಂದಿನಿ ಉತ್ಪನ್ನಗಳನ್ನು ಖರೀದಿಸುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಭಾಗಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ವಿಭಾಗಳಲ್ಲಿ ಆಯೋಜಿಸುವ ಹಾಗೂ ಹಬ್ಬಗಳಲ್ಲಿ ಸಿಹಿ ಹಂಚುವ ಕಾರ್ಯಕ್ರಮಗಳಿಗೆ ಇನ್ನು ಮುಂದೆ ನಂದಿನಿ ಸಿಹಿ ಉತ್ಪನ್ನಗಳನ್ನು ಖರೀದಿಸಬೇಕೆಂದು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ: ಶ್ರೀಮತಿ ಸ್ವಾತಿ ವಿ, ಅಪರ ನಿರ್ದೇಶಕರು (ಮಾರುಕಟ್ಟೆ) ರವರನ್ನು 7411654015 ದೂರವಾಣಿ ಸಂಖ್ಯೆಯಲ್ಲಿ ಸಂಪರ್ಕಿಸಬಹುದಾಗಿದೆ.

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಪ್ರತಿಗಳು:

1. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರು/ಸಂಯೋಜನಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

(1-4: ಸದರಿ ಸುತ್ತೋಲೆಯನ್ನು ತಮ್ಮ ವಿಭಾಗದ ಸೂಚನಾ ಫಲಕದಲ್ಲಿ ಪ್ರಕಟಿಸುವುದು.)

5. ಸಂಯೋಜಕರು, ಐ.ಸಿ.ಡಿ, ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಸುತ್ತೋಲೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳಿ ಇವರ ಪತ್ರವನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು.
6. ಕಾರ್ಯನಿರ್ವಾಹಕರ ಸಂಖ್ಯೆ:ಜಿ.ಎಲ್.9, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಮಾನ್ಯ ಕುಲಪತಿಯವರ/ಕುಲಸಚಿವರ/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈ.ವಿ.ವಿ.ನಿಲಯ, ಮೈಸೂರು.
8. ಕಛೇರಿ ಪ್ರತಿ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
KMF
KARNATAKA CO-OPERATIVE MILK PRODUCER'S FEDERATION LIMITED
ನಂದಿನಿ

ಕುಲಸಚಿವರ ಕಛೇರಿ
ಮೈ. ವಿ. ವಿ ಮೈಸೂರು
ಒಳ ಸಂ. RP-251
14/10/2026

ಸಂಖ್ಯೆ: ಕಹಾಮ/ಮಾರುಕಟ್ಟೆ/ಮಾ&ವಿ/2026-27 ದಿನಾಂಕ: 03.10.2026

ರವರಿಗೆ,
ಕುಲಸಚಿವರು,
ಮೈಸೂರು ವಿಶ್ವವಿದ್ಯಾನಿಲಯ,
ಕ್ರಾಫಾರ್ಡ್ ಹಾಲ್, ವಿಶ್ವವಿದ್ಯಾನಿಲಯ,
ಕಾರ್ಯಸೌಧ, ಕೆ ಜಿ ಕೊಪ್ಪಲ್, ಸರಸ್ವತಿಪುರಂ,
ಮೈಸೂರು-570005

ಸನ್ಮಾನ್ಯರೇ,

ವಿಷಯ: ದಸರಾ ಹಾಗೂ ದೀಪವಾಳಿ ಹಬ್ಬದ ಸಂದರ್ಭದಲ್ಲಿ ನಂದಿನಿ ಸಿಹಿ ಉತ್ಪನ್ನಗಳನ್ನು ಖರೀದಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಹಾಲು ಮಹಾಮಂಡಳವು ದೇಶದಲ್ಲಿಯೇ ಎರಡನೇ ಅತೀ ದೊಡ್ಡ ಸಹಕಾರಿ ಹಾಲು ಮಾರಾಟ ಮಹಾಮಂಡಳಿಯಾಗಿದ್ದು, ಕಳೆದ 04 ದಶಕಗಳಿಂದಲೂ ಸಹ ತನ್ನ 16 ಸಂಖ್ಯೆ ಸದಸ್ಯ ಹಾಲು ಒಕ್ಕೂಟಗಳ ಮೂಲಕ ರಾಜ್ಯದ 27.52 ಲಕ್ಷಕ್ಕೂ ಹೆಚ್ಚು ಹೈನುಗಾರರಿಂದ ದಿನಂಪ್ರತಿ ಸರಾಸರಿ 1.05 ಕೋಟಿ ಲೀಟರ್ ಹಾಲನ್ನು ಖರೀದಿಸಿ, ಖರೀದಿಸಿದ ಹಾಲನ್ನು ವ್ಯಸಸ್ಥಿತವಾಗಿ ಸಂಸ್ಕರಿಸಿ, **"ಗೋವಿನಿಂದ ಗ್ರಾಹಕರವರೆಗೆ"** ಎಂಬ ಶೀರ್ಷಿಕೆಯನ್ನು ಹೊತ್ತು **"ನಂದಿನಿ"** ಬ್ರ್ಯಾಂಡಿನಲ್ಲಿ ಉತ್ಕೃಷ್ಟ ಗುಣಮಟ್ಟದ ಹಾಲು ಹಾಗೂ ಹಾಲಿನ ಉಪಉತ್ಪನ್ನಗಳನ್ನು ಉತ್ಪಾದಿಸಿ, ರಾಜ್ಯ ಮತ್ತು ಹೊರರಾಜ್ಯಗಳಲ್ಲಿನ ಗ್ರಾಹಕರಿಗೆ ಸ್ಪರ್ಧಾತ್ಮಕ ದರದಲ್ಲಿ ಒದಗಿಸುತ್ತಾ ಬಂದಿದೆ.

ಮುಂದುವರೆದು, ಕಹಾಮವು ನಂದಿನಿ ಬ್ರ್ಯಾಂಡಿನಲ್ಲಿ 75 ಕ್ಕೂ ಹೆಚ್ಚು ಬಗೆಯ ಸಾಂಪ್ರದಾಯಿಕ ಸಿಹಿ ಹಾಗೂ ಖಾರ ಉತ್ಪನ್ನಗಳನ್ನು ಉತ್ಪಾದಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಹಬ್ಬ ಹಾಗೂ ಇನ್ನಿತರೆ ವಿಶೇಷ ಸಂದರ್ಭಗಳಲ್ಲಿ ಕೇಂದ್ರ/ರಾಜ್ಯ ಸರ್ಕಾರ ಸ್ವಾಮ್ಯದ ಪ್ರತಿಷ್ಠಿತ ಸಂಸ್ಥೆಗಳಿಗೆ ನಂದಿನಿ ಸಿಹಿ ಉತ್ಪನ್ನಗಳನ್ನು ಸರಬರಾಜು ಮಾಡುತ್ತಾ ಬಂದಿರುತ್ತದೆ. ಅಂತೆಯೇ 2026-27 ನೇ ಸಾಲಿನ ಅಕ್ಟೋಬರ್/ನವೆಂಬರ್ ಮಾಹೆಗಳಲ್ಲಿ ಆಚರಿಸಲಾಗುವ ದಸರಾ ಹಾಗೂ ದೀಪಾವಳಿ ಹಬ್ಬಗಳಲ್ಲಿ ಅಧಿಕಾರಿ/ಸಿಬ್ಬಂದಿ/ಕಾರ್ಮಿಕರಿಗೆ ಹಬ್ಬದ ಸಡಗರವನ್ನು ಇನ್ನಷ್ಟು ಹೆಚ್ಚಿಸಲು ತಮ್ಮ ಸಂಸ್ಥೆಯ ವತಿಯಿಂದ ಸಿಹಿ ಉತ್ಪನ್ನಗಳನ್ನು ನೀಡುತ್ತಿರುವುದು ತಿಳಿದುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ/ಕಾರ್ಮಿಕರಿಗೆ ನೀಡುವ ಸಿಹಿ ಉಡುಗೊರೆಗೆ ನಂದಿನಿ ಸಿಹಿ ಉತ್ಪನ್ನಗಳನ್ನು ಖರೀದಿಸಿ ವಿತರಿಸಲು ನಾಡಿನ ಸಮಸ್ತ ರೈತರ ಹಾಗೂ ಹೈನುಗಾರರ ಪರವಾಗಿ ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಹೆಚ್ಚಿನ ಮಾಹಿತಿಗಾಗಿ: ಶ್ರೀಮತಿ ಸ್ವಾತಿ. ವಿ, ಅಪರ ನಿರ್ದೇಶಕರು (ಮಾರುಕಟ್ಟೆ) ರವರನ್ನು 7411654015 ದೂರವಾಣಿ ಸಂಖ್ಯೆಯಲ್ಲಿ ಸಂಪರ್ಕಿಸಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಕರ್ನಾಟಕ ಹಾಲು ಮಹಾಮಂಡಳಿಯ ಪರವಾಗಿ,

Registrar Personal Section University
RP 216
Dt. 14/10/26

ವ್ಯವಸ್ಥಾಪಕ ನಿರ್ದೇಶಕರು

ಕೆ.ಎಂ.ಎಫ್. ಸಂಕೀರ್ಣ, ಅಂಚೆ ಚೀಲ ಸಂಖ್ಯೆ : 2915, ಡಾ|| ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು - 560 029. GST: 29AAAAKIII0GIZ7
K.M.F. Complex, P.B. No. 2915, Dr. M.H.Marigowda Road, Bengaluru-560 029. Phone : 080-26096800, 25536625, Fax : 080-25536105
Email : ps.md@kmf.coop / admin@kmf.coop / kmfnandini@gmail.com / director.mktg@kmf.coop / purchase@kmf.coop / mis@kmf.coop
systems@kmf.coop / ah@kmf.coop / kmf.cvt@kmf.coop / production@kmf.coop / qa@kmf.coop / Website : www.kmfnandini.coop